

# ಪಿಣ್ಣೆಯ ಪ್ರಪಂಚ!

ಹೆಸರು: ಪಿಣ್ಣೆ (ಕನ್ನಡ)
ನಿರ್ದೇಶನ: ಭುವನ್ ಸತ್ಯ
ಛಾಯಾಗ್ರಹಣ: ಪ್ರವೀಣ್ ಎಂ. ಪ್ರಭು, ವಿಶ್ವಾಸ್ ಕೌಂಡಿನ್ಯ
ಸಂಗೀತ: ಆಕಾಶ್ ವರ್ಮ, ಜೋಷೀಲ್ ವರ್ಮ
ತಾರಾಗಣ: ಸಂತೋಷ್ ಟಿ. ನೀನಾಸಮ್, ಮಂಜುನಾಥ ಎಂ.ಎಸ್., ರಂಜನ್ ಶೆಟ್ಟಿ

■ ಗೌರಿ

ಜನ ಏನು ಹೇಳುತ್ತಾರೋ ಎಂಬ ಭಯದಲ್ಲಿಯೇ ನಮ್ಮ ಬದುಕಿನ ಬಹುತೇಕ ಎಲ್ಲ ನಿರ್ಧಾರಗಳನ್ನೂ ತೆಗೆದುಕೊಳ್ಳುತ್ತೇವೆ. ಹಾಗೆ ತೆಗೆದುಕೊಳ್ಳುವ ನಿರ್ಧಾರಗಳು ಎಷ್ಟೋ ಸಲ ನಮಗೆ ನಿಜವಾದ ಖುಷಿ ಕೊಡುತ್ತಿರುವುದಿಲ್ಲ. ಆದರೆ ನಮಗೆ ನಿಜವಾದ ಖುಷಿ ಕೊಡುವ ಕೆಲಸ ಮಾಡುವಲ್ಲಿ ಸಮಾಜದ ಕುರಿತಾದ ಹಿಂಜರಿಕೆ ಅಡ್ಡಬರುತ್ತಿರುತ್ತದೆ. ಆ ಹಿಂಜರಿಕೆಯಲ್ಲಿಯೇ ನಮ್ಮದಲ್ಲದ ದಾರಿಯಲ್ಲಿ ನಾವು ಬದುಕು ಸವೆಸುತ್ತಿರುತ್ತೇವೆ. ಆದ್ದರಿಂದ ಯಾರಾದರೂ, ‘ನಿಮ್ಮ ಮನಸ್ಸು ಹೇಳಿದ ದಾರಿಯಲ್ಲಿ ನಡೆಯಿರಿ. ಆಡಿಕೊಳ್ಳುವ ಜನರ ಬಗ್ಗೆ, ಸಮಾಜದ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ. ಯಶಸ್ಸು ನಿಮ್ಮನ್ನು ಹಿಂಬಾಲಿಸಿಕೊಂಡು ಬರುತ್ತದೆ’ ಎಂಬ ಮಾತುಗಳನ್ನು ಹೇಳಿದಾಗೆಲ್ಲ ನಾವು ಕಿವಿಯರಳಿಸಿಕೊಂಡು ಕೇಳುತ್ತೇವೆ. ಹಾಗಾಗಿಯೇ ಆ ಮಾತನ್ನು ಬಗೆಬಗೆಯಾಗಿ ಹೇಳುವವರ ಸಂಖ್ಯೆಯೂ ಜಾಸ್ತಿಯೇ ಇದೆ. ಹೇಳುತ್ತಿರುವವರ ಸಂಖ್ಯೆ ಹೆಚ್ಚಿದಂತೆಲ್ಲ ಅದು ಕ್ಲೀಷೆಯಾಗಿಬಿಟ್ಟಿದೆ.

‘ಪಿಣ್ಣೆ’ ಎಂಬ ಕಿರುಚಿತ್ರ ಕೂಡ ಈಗಾಗಲೇ ಕ್ಲೀಷೆ ಅನಿಸಿದ ‘ಸಂದೇಶ’ವನ್ನೇ ಮತ್ತೆ ಹೇಳುವ ಕಿರುಚಿತ್ರ. ಕ್ಲೀಷೆಯನ್ನೇ ಹೊಸ ರೀತಿಯಲ್ಲಿ ಮುರಿದು ಕಟ್ಟಿದಾಗ ಅದು ಹೊಸತಾಗಿ ಕಾಣಿಸುವ ಸಾಧ್ಯತೆ ಇದೆ. ‘ಪಿಣ್ಣೆ’ ಅಂಥದ್ದೊಂದು ಪ್ರಯತ್ನ ಮಾಡುತ್ತಿದೆಯಾದರೂ ಅದರಲ್ಲಿ ಯಶಸ್ವಿಯಾಗಿಲ್ಲ. ಹಾಗಾಗಿ ಒಂದಿಷ್ಟು ಕೂತೂಹಲಕಾರಿ ಅಲ್ಲದ ಪ್ರಶ್ನೆಗಳನ್ನಷ್ಟೇ ಉಳಿಸಿ ಮುಗಿದು ಹೋಗುತ್ತದೆ. ನಿರೂಪಣೆಯಲ್ಲಿ ಮಾಡಿಕೊಂಡಿರುವ ತಂತ್ರಗಳಿಂದಾಗಿ ಹುಟ್ಟಿಕೊಂಡ ಆ ಪ್ರಶ್ನೆಗಳೂ ಈ ಚಿತ್ರವನ್ನು ನೋಡುಗನ ಮನಸಲ್ಲಿ ಬೆಳೆಸುವಷ್ಟು, ಹೊಸ ಬೆಳಕಲ್ಲಿ ಬೆಳಗುವಷ್ಟು ಪ್ರಭಾವಶಾಲಿಯಾಗಿಯೇನೂ ಇಲ್ಲ.

ಒಬ್ಬ ಎಂಟು–ಹತ್ತು ವರ್ಷದ ಹುಡುಗನನ್ನು ಅವನ ತಂದೆ ಒತ್ತಾಯದಿಂದ ಕೇಶಮಂಡನಕ್ಕೆ ಕರೆದುಕೊಂಡು ಹೋಗುವಲ್ಲಿಂದ ಈ ಕಿರುಚಿತ್ರ ಶುರುವಾಗುತ್ತದೆ. ಆ ಹುಡುಗನಿಗೆ ಕೂದಲು ಕತ್ತರಿಸಿಕೊಳ್ಳಲು ಇಷ್ಟವಿಲ್ಲ. ತಂದೆಗೆ ಮಗ ಹಾಗೆ ಉದ್ದುದ್ದ ಕೂದಲು ಬಿಟ್ಟುಕೊಂಡಿರುವುದು ಇಷ್ಟವಿಲ್ಲ. ಗದರಿ ಕಟಿಂಗ್‌ಶಾಪ್‌ಗೆ ಕರೆದುಕೊಂಡು ಹೋಗುತ್ತಾನೆ. ಆ ಹುಡುಗನ ಕೈಯಲ್ಲಿ ವಿಕ್ರಮ–ಬೇತಾಳನ ಕಥೆಗಳಿರುವ ಪುಸ್ತಕ ಇದೆ. ಅದನ್ನು ನೋಡಿದ ಅಜ್ಜ, ‘ನನಗೆ ಬೇತಾಳ ಹೇಳುವ ಕಥೆಗಳು ಗೊತ್ತು. ನೀನು ಸುಮ್ಮನೆ ಕೂತಿದ್ದರೆ ಕೂದಲು ಕತ್ತರಿಸಿಯಾದ ಮೇಲೆ ಹೇಳುತ್ತೇನೆ’ ಎಂದು ಆಸೆ ತೋರಿಸುತ್ತಾನೆ. ಅದಕ್ಕೆ ಒಪ್ಪಿಕೊಳ್ಳುವ ಹುಡುಗ, ‘ಆಯ್ತು. ನೀನು ಹೇಳುವುದು ಯಾರ ಕಥೆ? ರಾಜನದಾ? ರಾಣಿಯದಾ’ ಎಂದು ಕೇಳುತ್ತಾನೆ. ಅಜ್ಜ, ‘ರಾಜನೂ ಅಲ್ಲ, ರಾಣಿಯೂ ಅಲ್ಲ, ನಮ್ಮ ಪಿಣ್ಣೆಯ ಕಥೆ’ ಎಂದು ಹೇಳುತ್ತಾನೆ. ಅಲ್ಲಿಂದ ಪಿಣ್ಣೆಯ ಕಥೆ ತೆರೆದುಕೊಳ್ಳುತ್ತದೆ.

ಅತಿಯಾದ ಬುದ್ಧಿವಂತನೂ ಅಲ್ಲದ, ದಡ್ಡನೂ ಅಲ್ಲದ ‘ಆ್ಯವರೇಜ್ ಹುಡುಗ’ನೊಬ್ಬನ ಬದುಕಿನ ಕಥೆಯನ್ನು ನಿರ್ದೇಶಕರು ಹೇಳಹೊರಟಿದ್ದಾರೆ. ಪಿಣ್ಣೆಯೇ ಇಲ್ಲಿ ತನ್ನ ಕಥೆಯನ್ನು ಹೇಳಿಕೊಳ್ಳುತ್ತಾನೆ. ತುಸು ವಿನೋದದ ಧಾಟಿಯಲ್ಲಿಯೇ ಆ್ಯವರೇಜ್ ಹುಡುಗನ ಗೊಂದಲಗಳನ್ನು ಹಿಡಿದಿಡಲು ನಿರ್ದೇಶಕರು ಯತ್ನಿಸಿದ್ದಾರೆ. ಏನಾದರೂ ಸಾಧಿಸಬೇಕು ಎಂಬ ಹಂಬಲ; ಏನು ಮಾಡಬೇಕು ಎಂಬುದು ತಿಳಿಯದ ಗೊಂದಲದ ಸುತ್ತಲೇ ಬೆಳೆಯುವ ಈ ಕಥೆ ಅತ್ತ ಪಿಣ್ಣೆಯ ಬದುಕಿನ ಗಾಢ ಚಿತ್ರವನ್ನೂ ಕಟ್ಟಿಕೊಡುವುದಿಲ್ಲ; ಇತ್ತ ನಮ್ಮ ಬದುಕಿನಲ್ಲಿಯೂ ನಡೆಯುವ ಸಂಗತಿಗಳನ್ನು ನಮ್ಮೆದುರಿಗೇ ಕಾಣಿಸಿ ಮನಃಪೂರ್ತಿ ನಕ್ಕು ನಗಿಸುವುದೂ ಇಲ್ಲ. ಕಥೆಯ ವಿಸ್ತಾರ ಮತ್ತು ಅದನ್ನು ನಿರ್ವಹಿಸಿದ ರೀತಿಯೂ ಕಿರುಚಿತ್ರ ಮಾಧ್ಯಮಕ್ಕೆ ಅಷ್ಟಾಗಿ ಹೊಂದಿಕೊಂಡಿಲ್ಲ. ಪಿಣ್ಣೆ ಯಾರು? ಅವನು ಏನಾದ? ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಹಲವು ಸುಳಿವುಗಳನ್ನು ಕೊಟ್ಟು ನಿರ್ದೇಶಕರು ಸುಮ್ಮನಾಗಿದ್ದಾರೆ.

ಕಿರುಚಿತ್ರ ವೀಕ್ಷಣೆಗೆ https://bit.ly/3A39921 ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.